
ಮೀನುಗಳು ಕಾಣಿಸಬೇಕು. ದಂಡೆಯ ಗಿಡ, ಮರ ಅವಕ್ಕೆ ಹಬ್ಬಿದ ದಟ್ಟ ಬಳ್ಳಿ ಕಣ್ಣೊಳಗೆ ಮೂಡುವಂತಿತ್ತು. ದಕ್ಷಿಣೋತ್ತರ, ಪೂರ್ವಪಶ್ಚಿಮ ದಿಗಂತಗಳು ಕಣ್ಣಿಗೆ ವಿಸ್ತರಿಸುವಂತಿದ್ದವು. ಆಕಾಶದ ಚಂದ್ರ, ಲಕ್ಷ ನಕ್ಷತ್ರಗಳ ದರ್ಶನ. ಇದೆಲ್ಲಾ ನಿಮಗೆ ಹೇಳಿದ್ದೆನಲ್ಲಾ ಡ್ಯಾಡಿ...'

'ಅದೇ ನೀನು ಹೇಳಿದ್ದೆಲ್ಲಾ ಸರಿಕಣಯ್ಯ. ಅಂಥ ಗಾಜು, ಸಿಮೆಂಟು ಮೆತ್ತಿದ ಮನೆಗಳಲ್ಲಿ ಗುಬ್ಬಿಗಳು ಗೂಡು ಕಟ್ಟುವುದಿಲ್ಲ, ಸಂತಾನ ಮಾಡುವುದಿಲ್ಲ ಅಂತ ನಾನು ಹೇಳಿದ್ದೆನಲ್ಲಯ್ಯ. ಪ್ರಾಣಿ, ಪಕ್ಷಿಗಳು ಹಾರಾಡುವುದಕ್ಕೆ ನಮ್ಮ ಎಡೂರು ಮಂಗಲದ ಹೆಂಚಿನ ಮನೆಗಳೇ ಲಾಯಕ್ಕು ಕಣಯ್ಯ...'

'... ಡ್ಯಾಡಿ ದೂರವಾಣಿ ಕರೆ ತೆಗೆದುಕೊಂಡಿರುವುದು ಅರ್ಧ ಗಂಟೆಗೆ ಮಾತ್ರ. ಮುಂದಿನ ಕತೆ ಹೇಳಿಬಿಡುತ್ತೇನೆ ಕೇಳಿ. ನಾನು ನಾಲ್ಕಾರು ಭಾರಿ ಅವರಲ್ಲಿಗೆ ಹೋಗಿದ್ದೆ. ಯಾಕೆಂದರೆ ಆ ಮನೆಯಲ್ಲಿ ಇಬ್ಬರೇ ಇದ್ದರಲ್ಲ. ಸುಮನಾ ಅವರು ಇನ್ನೊಂದಿಷ್ಟು ಶಕ್ತಿಯಿದೆ, ಮನೆಯಲ್ಲಿ ಕೂತರೆ ಬೇಜಾರು ಅಂತ ಸರೋವರದಿಂದ ನೂರು ಮೈಲಿ ದೂರದ ಲುಡಿನ್‌ಟನ್‌ನಲ್ಲಿ ಕ್ಲಿನಿಕ್ ನಡೆಸುತ್ತಿದ್ದರು. ನಿತ್ಯ ಅವರೇ ಡ್ರೈವ್ ಮಾಡಿಕೊಂಡು ಹೋಗಿ ಬರುತ್ತಿದ್ದರು. ದಿನವೆಲ್ಲ ಮನೆಯಲ್ಲಿ ಚಂದ್ರಶೇಖರ ಮನವಳ್ಳಿಯವರು ಒಬ್ಬರೇ.



ಈಗ ಎರಡು ವಾರದ ಹಿಂದೆ ಮನವಳ್ಳಿ ಅವರು ನನಗೆ ದೂರವಾಣಿ ಮಾಡಿ, 'ಮನಿಯಾಕಿ ನಿನ್ನೆ ಕ್ಲಿನಿಕ್‌ಗೆ ಹೋದವಳು ಬಂದಿಲ್ಲ ನೋಡ್ರಿ' ಅಂದರು. ಬೇಕಾದರೆ ಹೋಗಿಬರೋಣ ಬನ್ನಿ ಅಂಕಲ್, ನಾನೇ ಡ್ರೈವ್ ಮಾಡುತ್ತೇನೆಂದೆ. ಇಬ್ಬರೂ ಹೋದೆವು. ಸಂಜೆ ಐದರ ಹೊತ್ತು. ಕ್ಲಿನಿಕ್ ತೆರೆದಿದೆ. ಚಂದ್ರಶೇಖರರು, 'ಜನ ಹೆಚ್ಚು ಇದ್ದಾಗಲೆಲ್ಲ ಒಂದೊಂದು ದಿನ ಇಲ್ಲೇ ಇದ್ದು ಬರುತ್ತಿದ್ದಳು. ಇವತ್ತೂ ಜನ ಒಳಗೆ ಇರಬೇಕು. ಡಿಸ್ಟರ್ಬ್ ಮಾಡುವುದು ಬೇಡ' ಎಂದರು. ಅಲ್ಲೇ ಒಂದು ರೆಸ್ಟೋರಾಂಟ್‌ಗೆ ಹೋಗಿ ಒಂದಿಷ್ಟು ಸ್ನ್ಯಾಕ್ಸ್ ತೆಗೆದುಕೊಂಡು ಕೂತೆವು. 'ಸಮೀರ್ ಯಾಕೋ ಎದಿಯಾಗ ಇವತ್ತು ಜರಾ ಆತಂಕ ಅನ್ನುಸ್ತು. ನಿಮಗಾ ಅದಕ್ಕಂತಲೇ ಡಿಸ್ಟರ್ಬ್ ಮಾಡಿದನ್ರಿ' ಅಂದರು. 'ನಾವು ಕ್ಲಿನಿಕ್ ಕಡೆ ಬಂದೆವಲ್ಲ, ನಿಮಗೆ ಸಮಾಧಾನ ಆಯಿತಲ್ಲಾ. ಹೋಗಿ ನೋಡಿ ಎಲ್ಲ ಒಟ್ಟಿಗೆ ಹೋಗಿಬಿಡೋಣ' ಎಂದೆ. ಎಷ್ಟೋ ಹೊತ್ತಿನ ಮೇಲೆ ಇಬ್ಬರೂ ಎದ್ದು ಕ್ಲಿನಿಕ್ ಮುಂದೆ ಬಂದರೆ ಜನ ಒಳಗೂ ಹೋಗುತ್ತಿಲ್ಲ. ಹೊರಗೂ ಬರುತ್ತಿಲ್ಲ. ಸಂಜೆಯ ಹೊತ್ತು ವಾಕಿಂಗ್ ಹೋಗುವವರು ಹಿಡಿದು ಹೋಗುತ್ತಿದ್ದ ನಾಯಿಗಳು ಮಾತ್ರ ಕ್ಲಿನಿಕ್ ಎದುರು ನಿಂತು ಬೊಗಳುತ್ತಿದ್ದವು. ಕಾಲು ಕೆರೆದು ಒಳಗೆ ನುಗ್ಗಲು ಹಗ್ಗ ಜಗ್ಗುತ್ತಿದ್ದವು. ಕ್ಲಿನಿಕ್‌ನ ಮುಂಬಾಗಿಲು ತೆರೆದಿತ್ತಲ್ಲ, ನಾವು ನಿಧಾನಕ್ಕೆ ಒಳಹೊಕ್ಕೆವು. ಜನವೇ ಇಲ್ಲ. ಮೇಲಿನ ಫ್ಯಾನ್ ತಿರುಗುತ್ತಿತ್ತು. ಚಂದ್ರಶೇಖರಯ್ಯನವರಿಗೆ ಒಳಗೆ ಸುಮನಾ ಇದ್ದಾರೋ ಇಲ್ಲವೋ ಎಂಬ ಆತಂಕ ಹತ್ತಿಕೊಂಡಂತೆ ಕಾಣುತ್ತಿತ್ತು. ಹೊರಗೆ ಲೋಂಜಿನಲ್ಲಿ ಜನವೇ ಇಲ್ಲದೆ ಅವಳು ಯಾಕೆ ಒಳಗೆ ಕೂತಿದ್ದಾಳೆ ಎಂದರು. ನೋಡಿಯೇ